SEVA BHARATHI
सेवा ही परमो धर्मः

ಸಂಪುಟ : 03
ಸಂಚಿಕೆ : 04

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ
(ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ-2019 ಪುರಸ್ಕೃತ ಸಂಸ್ಥೆ)
ಮಾಸಿಕ e-ನ್ಯೂಸ್ ಲೆಟರ್ – ಜೂನ್ 2022

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ-॥, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. – 574 216

## ಅಮೇರಿಕಾ ದಾನಿಯಿಂದ 1 ಲಕ್ಷ ರೂ.ಗಳ ಹಸ್ತಾಂತರ



## ದಿವ್ಯಾಂಗರ ಬಳಿಗೆ ಆನ್‌ಲೈನ್ ಸೇವೆ

### ಸೇವಾಧಾಮದ ವಿನೂತನ ಹೆಜ್ಜೆ

- ಜೂನ್‌ನಿಂದ ಆರಂಭ
- ಕಾರ್ಯಾಗಾರದ ಮೂಲಕ ಧೈರ್ಯ ತುಂಬುವ ಯೋಜನೆ
- ದಿವ್ಯಾಂಗರ ಪೋಷಕರಿಗೂ ಅನುಕೂಲ
- ಏನಿದು ಆನ್ ಲೈನ್ ಸೇವೆ ಇಲ್ಲಿದೆ ಮಾಹಿತಿ

## ಚಿಕ್ಕಮಗಳೂರು, ಉಡುಪಿ ಪ್ರವಾಸ

## ಭರವಸೆ ತಂದ ದಾನಿಗಳ ನೆರವು

## ಕೇಂದ್ರಕ್ಕೆ ಭೇಟಿ ಕೊಟ್ಟವರು

## ಮೋಹನ್ ಯಶೋಗಾಥೆ

## ನಮ್ಮಿಂದಿಷ್ಟು

ವಿದ್ಯಾರ್ಥಿಗಳಿಲ್ಲದೆ ಮುಚ್ಚಲ್ಪಟ್ಟಿರುವ ಉಡುಪಿ ಜಿಲ್ಲೆಯ ಕಾಪು ತಾಲೂಕಿನ ಕೊರಂಗ್ರಪ್ಪಾಡಿ ಸರಕಾರಿ ಶಾಲೆಯನ್ನು ಜಿಲ್ಲಾ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಯವರ ಸೂಚನೆಯಂತೆ ಪರಿಶೀಲಿಸಿ ಪೂರಕವಾಗಿ ವರದಿಯನ್ನು ಸಲ್ಲಿಸಿರುವುದು ಉಲ್ಲೇಖನೀಯ ಸಂಗತಿ. ಮುಂದಿನ ದಿನಗಳಲ್ಲಿ ಸುತ್ತಮುತ್ತಲ ಜಿಲ್ಲೆಗಳಲ್ಲಿರುವ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಒಂದು ಸೇವಾ ಕೇಂದ್ರವಾಗಿ ತಲೆಯೆತ್ತಿ ನಿಲ್ಲಲಿದೆ ಈ ಕಟ್ಟಡ.

ಜೂನ್‌ನಿಂದ ಬೆಂಗಳೂರಿನ APD ಸಂಸ್ಥೆಯ ಸಹಯೋಗದೊಂದಿಗೆ ಮಾಡಿದ ಒಡಂಬಡಿಕೆಯನ್ವಯ ಸಮುದಾಯದಲ್ಲಿ ಮತ್ತು ಪುನಶ್ಚೇತನ ಕೇಂದ್ರದಲ್ಲಿ ಕಾರ್ಯಚಟುವಟಿಕೆ ಕಾರ್ಯಾನುಷ್ಠಾನಗೊಳ್ಳಲು ಪ್ರಾರಂಭ ಗೊಂಡಿದೆ.

ಈ ತಿಂಗಳಿನಿಂದ ಮೊದಲ್ಗೊಂಡು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಪ್ರತಿ ತಿಂಗಳ 3ನೇ ಸೋಮವಾರದಂದು ಸಾಯಂಕಾಲ 4 ಗಂಟೆಯಿಂದ 5 ಗಂಟೆ ತನಕ ಆನ್‌ಲೈನ್‌ನಲ್ಲಿ ಮಾಹಿತಿ ಕಾರ್ಯಾಗಾರವು ಪ್ರಾರಂಭಗೊಂಡಿದೆ. ಈ ಕಾರ್ಯಾಗಾರಗಳು ಮುಂದಿನ ದಿನಗಳಲ್ಲಿ ಅದ್ಭುತ ಪರಿಣಾಮಗಳನ್ನು ನೀಡಬಹುದೆಂಬ ವಿಶ್ವಾಸದಲ್ಲಿದ್ದೇವೆ. ಒಟ್ಟಿನಲ್ಲಿ ಬೆನ್ನುಹುರಿ ಅಪಘಾತದ ದಿವ್ಯಾಂಗರು ವಿಶ್ವಾಸದ ಬದುಕನ್ನು ಕಾಣಬೇಕಿದೆ. ಅದಕ್ಕಾಗಿ ನಮ್ಮ ಪ್ರಯತ್ನ ನಿರಂತರವಿದೆ. 'ಸೇವಾ ಹಿ ಪರಮೋ ಧರ್ಮ' ವಾಕ್ಯ ನೆನಪಿಸುತ್ತಾ ತಮ್ಮೆಲ್ಲರ ಪೂರ್ಣ ರೀತಿಯ ಸಹಕಾರವನ್ನು ಬಯಸುವೆ,

ಇತೀ ತಮ್ಮವ
ಕೆ. ವಿನಾಯಕ ರಾವ್

## ನಮ್ಮ ವಿಳಾಸ

**ಪ್ರಧಾನ ಕಚೇರಿ :**

ಸೇವಾನಿಕೇತನ, ಕನ್ಯಾಡಿ–II
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

**ಜಿಲ್ಲಾ ಕಚೇರಿ :**

ಸೇವಾನಿಕೇತನ
ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಬಳಿ
ಹೆರ್ಗ, ಉಡುಪಿ ತಾಲೂಕು – 576 107
ಮೊ.: 9606044893

**ಸೇವಾ ಕೇಂದ್ರ :**

ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)
ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888

## ನಮ್ಮ ತಂಡ

ಶ್ರೀ ಕೆ. ವಿನಾಯಕ ರಾವ್ – ಅಧ್ಯಕ್ಷರು
ಶ್ರೀಮತಿ ಸ್ವರ್ಣಗೌರಿ – ಕಾರ್ಯದರ್ಶಿ
ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ – ಖಜಾಂಚಿ
ಶ್ರೀ ಕೆ. ಯು. ಗಿರೀಶ್ ರಾವ್ – ಉಪಾಧ್ಯಕ್ಷರು
ಶ್ರೀ ಕೆ. ಬಾಲಕೃಷ್ಣ – ಟ್ರಸ್ಟಿ

## ಸಲಹಾ ಮಂಡಳಿ


ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
ಶ್ರೀಮತಿ ಮನೋರಮ ಭಟ್
ಶ್ರೀ ಉದಯಶಂಕರ್
ಶ್ರೀ ಹರೀಶ್ ಟಿ. ಪಿ.
ಶ್ರೀ ಗೋಪಾಲ ಕೆ. ಪಿ.
ಶ್ರೀ ವಿಷ್ಣು ಪ್ರಸಾದ್ ತೆಂಕಿಲ್ಲಾಯ
ಶ್ರೀಮತಿ ಜ್ಯೊಸ್ ಪಿರೇರಾ

## ಸಂಚಾಲಕರು

ಶ್ರೀ ಕೆ. ಪುರಂದರ ರಾವ್ – ಸಂಚಾಲಕರು, ಸೇವಾಧಾಮ
ಶ್ರೀಯುತ ರಾಯನ್ ಫೆರ್ನಾಂಡಿಸ್ – ನಿರ್ದೇಶಕರು, ಸೇವಾಧಾಮ
ಶ್ರೀ ವಿಜಯ ಕೊಡವೂರು – ನಿರ್ದೇಶಕರು, ಸೇವಾಧಾಮ
ಡಾ. ಮುರಳೀಧರ ನಾಯಕ್ – ನಿರ್ದೇಶಕರು, ಸೇವಾಧಾಮ

# ಅಮೆರಿಕಾ ದಾನಿಯಿಂದ 1 ಲಕ್ಷ ರೂ. ನೆರವು



**ಕೊಕ್ಕಡ:** ಅಮೆರಿಕದ ತಸ್ಕಿನ್ ನಲ್ಲಿ ಹುಂಡೈ ಕಂಪೆನಿಯ ನಿರ್ದೇಶಕ ರಾಗಿರುವ ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯ ಪಣಂಬೂರಿನ ನಿವಾಸಿ ಹಾಗೂ ಸೇವಾಭಾರತಿಯ ಪೋಷಕರಾದ ಪಿ.ಬಾಲಕೃಷ್ಣ ರಾವ್ ಅವರ ಹಿರಿಯ ಪುತ್ರ ವಿಜಯ ರಾವ್ ಅವರು ಸೌತಡ್ಕದಲ್ಲಿರುವ ಸೇವಾಧಾಮಕ್ಕೆ ಜೂ. 21 ರಂದು ಆಗಮಿಸಿ 1 ಲಕ್ಷ ರೂ. ಮೌಲ್ಯದ ಚೆಕ್ಕನ್ನು ಕೇಂದ್ರದ ಸಂಚಾಲಕರಾಗಿರುವ ಪುರಂದರ ರಾವ್ ಅವರ ಮೂಲಕ ದೇಣಿಗೆಯಾಗಿ ನೀಡಿದರು.

ವಿಜಯ್ ರಾವ್ ಅವರು ತಮ್ಮ ರಜಾ ಅವಧಿಯಲ್ಲಿ ಭಾರತಕ್ಕೆ ಬಂದಿದ್ದು ಈ ವೇಳೆ ಸೇವಾಧಾಮದ ಸಂಚಾಲಕರಿಂದ ಇಲ್ಲಿನ ಪುನಶ್ಚೇತನ ಕೇಂದ್ರದ ಕಾರ್ಯಚಟುವಟಿಕೆಗಳನ್ನು ತಿಳಿದುಕೊಂಡರು. ಇದರಿಂದ ಪ್ರೇರೇಪಣೆಗೊಂಡು ಸೇವಾಧಾಮದ ಮುಂದಿನ ಚಟುವಟಿಕೆಗಳ ಅನುಷ್ಠಾನಕ್ಕಾಗಿ ಧನಸಹಾಯ ನೀಡಿದರು. ಸೇವಾಧಾಮದ ಕಾರ್ಯಚಟುವಟಿಕೆ ವಿಸ್ತಾರಗೊಳ್ಳಲಿ ಎಂದು ಶುಭಹಾರೈಸಿದರು.

## ದಾನಿಗಳು




**ಸೌತಡ್ಕ :** ಜೂನ್ 20 ರಂದು ಮುಂಡಾಜೆ ಗ್ರಾಮದ ಮಹಾದೇವ ಬೆಂಡೆ ಮತ್ತು ಅವರ ಕುಟುಂಬ ಸದಸ್ಯರು ಕೇಂದ್ರಕ್ಕೆ ಆಗಮಿಸಿ ತಮ್ಮ ಹುಟ್ಟಿದ ಹಬ್ಬದ ಪ್ರಯುಕ್ತ ಸಂಸ್ಥೆಗೆ ರೂ. 5000/– ಗಳನ್ನು ನೀಡಿ ಫಲಾನುಭವಿಗಳಿಗೆ ಶುಭ ಹಾರೈಸಿದರು.




**ಸೌತಡ್ಕ :** ಜೂನ್ 8 ರಂದು ಸಂಸ್ಥೆಯ ಟ್ರಸ್ಟಿಗಳಾದ ಬಾಲಕೃಷ್ಣ ಕೆ. ಇವರು ತಮ್ಮ ಕುಟುಂಬದ ಸದಸ್ಯರೊಂದಿಗೆ ಕೇಂದ್ರಕ್ಕೆ ಆಗಮಿಸಿ ವಿವಾಹ ವಾರ್ಷಿಕೋತ್ಸವದ ಪ್ರಯುಕ್ತ ಸಂಸ್ಥೆಯ ಕಾರ್ಯಚಟುವಟಿಕೆಗಳಿಗೆ ರೂಪಾಯಿ 5000/–ವನ್ನು ಚೆಕ್ ಮೂಲಕ ನೀಡಿ ಫಲಾನುಭವಿಗಳಿಗೆ ಶುಭ ಹಾರೈಸಿದರು.



## ಆನ್‌ಲೈನ್‌ನಲ್ಲಿ ಮಾಹಿತಿ ಕಾರ್ಯಗಾರ ಪ್ರಾರಂಭ





**ಕನ್ಯಾಡಿ:** ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಸರ್ವತೋಮುಖ ಅಭಿವೃದ್ಧಿಗಾಗಿ ದಿ. 20.06.2022 ರಂದು ಆನ್‌ಲೈನ್‌ನಲ್ಲಿ ಮಾಹಿತಿ ಕಾರ್ಯಾಗಾರವನ್ನು ಪ್ರಾರಂಭಗೊಳಿಸಲಾಯಿತು. ಈ ಪ್ರಥಮ ಕಾರ್ಯಾಗಾರವನ್ನು ಸಾಂಕೇತಿಕವಾಗಿ ಉದ್ಘಾಟಿಸಿದ ಸೇವಾಭಾರತಿಯ ಅಧ್ಯಕ್ಷರಾದ ಕೆ.ವಿನಾಯಕ ರಾವ್‌ರವರು ಪ್ರತಿ ತಿಂಗಳ 2ನೇ ಸೋಮವಾರದಂದು ಸಾಯಂಕಾಲ 4 ಗಂಟೆಯಿಂದ 5 ಗಂಟೆಯ ತನಕ ನಡೆಯುವ ಕಾರ್ಯಾಗಾರದ ಸದುಪಯೋಗಗಳನ್ನು ಪ್ರತಿಯೊಬ್ಬ ದಿವ್ಯಾಂಗರು ಪಡೆದುಕೊಳ್ಳುವುದರ ಮೂಲಕ ಜೀವನಾಭಿವೃದ್ಧಿ ಯನ್ನು ಹೊಂದಬಹುದೆಂದು ತಿಳಿಸಿ ಫಲಾನುಭವಿ ಗಳಿಗೆ ಶುಭ ಹಾರೈಸಿದರು.

ಸಂಪನ್ಮೂಲ ವ್ಯಕ್ತಿಯಾಗಿ ಸೇವಾಧಾಮದ ನಿರ್ದೇಶಕರಾದ ಉಡುಪಿಯ ರಾಯನ್ ಫೆರ್ನಾಂಡಿಸ್‌ರವರು ಭಾಗವಹಿಸಿ ತನ್ನ ಜೀವನದ ಯಶೋಗಾಥೆಯನ್ನು ತಿಳಿಸಿದರು. ಹಾಗೂ ಬೆನ್ನುಹುರಿ ಅಪಘಾತದ ಬಗ್ಗೆ ಅರಿವು ಮತ್ತು ಒತ್ತಡ ಗಾಯಗಳ ಬಗ್ಗೆ ತಿಳಿಸಿದರು. ಕಾರ್ಯಾಗಾರವನ್ನು ಸಂಸ್ಥೆಯ ಕಾರ್ಯಕಾರಿ ನಿರ್ದೇಶಕಿ ರೂಪಲಕ್ಷ್ಮಿ ನಿರ್ವಹಿಸಿದರು. ಒಟ್ಟು 34 ಮಂದಿ ಫಲಾನುಭವಿಗಳು ಭಾಗವಹಿಸಿದ್ದರು. ಮುಂದಿನ ಕಾರ್ಯಾಗಾರಗಳಲ್ಲಿ ವಿವಿಧ ತಜ್ಞವೈದ್ಯರು, ಫಿಸಿಯೋಥೆರಪಿಸ್ಟ್‌ಗಳು ಹಾಗೂ ಅನುಭವಿಗಳು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಲಿದ್ದಾರೆ.

## ನಮ್ಮ ಭೇಟಿಗಳು

### ಜೂನ್ 7 & 8 ರಂದು ಚಿಕ್ಕಮಗಳೂರು ಜಿಲ್ಲೆಗೆ ಭೇಟಿ



**ಸಖರಾಯಪಟ್ಟಣ :** ಪಟ್ಟಣದಲ್ಲಿರುವ ಮೆಸ್ಕಾಂ ಉದ್ಯೋಗಿ ಕೃಷ್ಣ ಹಾಗೂ ಕೃಷಿ ರವೀಶರನ್ನು ಭೇಟಿ ಮಾಡಲಾಯಿತು. ಮತ್ತು ಕೃಷ್ಣರಿಗೆ ರಿಯಾಯಿತಿ ದರದಲ್ಲಿ ಗಾಲಿಕುರ್ಚಿ ಒದಗಿಸಿಕೊಡಲಾಯಿತು.



**ಕಡೂರು :** ಕಡೂರಿನ ರೋಟರಿ ಕ್ಲಬ್ ಆಯೋಜಿಸಿದ ಕಾರ್ಯಕ್ರಮದಲ್ಲಿ ಬೆನ್ನುಹುರಿ ಅಪಘಾತ ಮತ್ತು ನಿರ್ವಹಣೆ ಬಗ್ಗೆ ಜಾಗೃತಿ ಅರಿವನ್ನು ನಮ್ಮ ಸಿಬ್ಬಂದಿ ಚರಣ್ ನಡೆಸಿಕೊಟ್ಟರು.

ಈ ಸಂದರ್ಭದಲ್ಲಿ ಬೋಸ್ಟಿನಾ ಉಪಸ್ಥಿತರಿದ್ದರು. ಆಶಾಕಿರಣ ಅಂಧ ಶಾಲೆಯ ಕಾರ್ಯದರ್ಶಿಯಾದ ಮಹೇಶ್ ಎಂ.ಎಚ್.ರ ಮೂಲಕ ಆಶಾಕಿರಣ ಅಂಧ ಶಾಲೆಗೆ ಭೇಟಿ ಕೊಡಲಾಯಿತು. ಅಲ್ಲಿಯ ಸವಿವರ ನೀಡಿದ ತಂಡವು ನಮ್ಮ ಸೇವೆಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ನಮ್ಮ ಸಂಸ್ಥೆಯ ಅಧ್ಯಕ್ಷರನ್ನು ಗೌರವಿಸಿದರು.



**ಸೆಕ್ಯೂರ್ ಹಾಸ್ಪಿಟಲ್**‌ನ ಡಾ। ಕೃಷ್ಣೇಗೌಡರನ್ನು ಭೇಟಿ ಮಾಡಿದ ನಮ್ಮ ತಂಡವು ಅದರಲ್ಲಿ ಮುಂದಿನ ದಿನಗಳಲ್ಲಿ ಜಿಲ್ಲೆಯಲ್ಲಿ ಮಾಡುವ ಸೇವಾಕಾರ್ಯಗಳಿಗೆ ಕೈಜೋಡಿಸುವಂತೆ ವಿನಂತಿಸಲಾಯಿತು. ಪೂರಕ ಸ್ಪಂದನೆ ದೊರೆತ ಹಿನ್ನೆಲೆಯಲ್ಲಿ ಅಲ್ಲಿನ ಅಂಧಶಾಲಾ ಆವರಣದಲ್ಲಿ ನಮ್ಮ ಫೀಲ್ಡ್ ಕೋ–ಆರ್ಡಿನೇಟರ್ ಉಳಿಸಿಕೊಳ್ಳುವ ವ್ಯವಸ್ಥೆಗಾಗಿ ಕೇಳಿಕೊಳ್ಳಲಾಯಿತು.

### ಜೂನ್ 1 ರಿಂದ 3 ದಿನಗಳ ಕಾಲ
### ಉಡುಪಿ ಜಿಲ್ಲೆಯ ಪ್ರವಾಸ

ಜೂನ್ 1 ರಂದು ಕೇಶವ ಕೃಪಾ ಕಾರ್ಯಾಲಯದಲ್ಲಿ ಉಡುಪಿ ಜಿಲ್ಲೆಯಲ್ಲಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ನಿರಂತರ ಸಂಪರ್ಕ ಮತ್ತು ಸೇವೆಗಳಿಗಾಗಿ ಪ್ರತಿ ತಾಲೂಕಿಗೆ ಇಬ್ಬರಂತೆ ಪ್ರಮುಖರನ್ನು ನೇಮಿಸಲಾಯ್ತು. ಸೇವಾನಿಧಿ ಸಂಗ್ರಹಕ್ಕಾಗಿ ಯೋಜನೆ ಹಮ್ಮಿಕೊಳ್ಳಾಯಿತು.

ಜೂನ್ 2 ರಂದು 6 ದಿವ್ಯಾಂಗರ ಮನೆಗೆ ಭೇಟಿನೀಡಿ ಅವರನ್ನು ಮಾತನಾಡಿಸಿ ಪ್ರೇರಣೆ ನೀಡಲಾಯಿತು. ಅರ್ಹರಿಗೆ ಕುಂದಾಪುರ ರೆಡ್‌ಕ್ರಾಸ್ ಸೊಸೈಟಿ ಒದಗಿಸಿ ನೀರಿನ ಹಾಸಿಗೆಯನ್ನು ಹಸ್ತಾಂತರಿಸಲಾಯಿತು. ನಮ್ಮ ಸಂಸ್ಥೆಗೆ ಅಗತ್ಯವಿರುವ ಫಿಸಿಯೋಥೆರಪಿಸ್ಟ್‌ಗಾಗಿ ಇಬ್ಬರನ್ನು ಹೆರ್ಗದ ಸೇವಾನಿಕೇತನದಲ್ಲಿ ಸಂದರ್ಶನ ಮಾಡ ಲಾಯಿತು.

ಜೂನ್ 3 ರಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ, ಪರ್ಕಳ ಹಾಗೂ ಕೊಡವೂರುನ ಶಾಖೆಗೆ ಧನಸಹಾಯ ಕೋರಿ ಮನವಿ ಸಲ್ಲಿಸಲಾಯಿತು. ಜಿಲ್ಲಾ ಕಾರ್ಯನಿರ್ವಹಣಾಧಿಕಾರಿಯವರನ್ನು ಭೇಟಿ ಮಾಡಿ ಕೊರಂಗ್ರಪಾಡಿ ಶಾಲೆಯ ಒದಗಿಸುವಿಕೆಗೆ ನೆನಪಿಸಲಾಯಿತು.

ಜೂನ್ 5 ರಂದು ನಮ್ಮ ಕಾರ್ಲ ಚಾನೆಲ್‌ನಲ್ಲಿ ಅಧ್ಯಕ್ಷರಾದ ಕೆ.ವಿನಾಯಕ ರಾವ್‌ರನ್ನು ಶ್ರೀಮತಿ ರಮಿತಾ ಶೈಲೇಂದ್ರ ರಾವ್‌ರವರು ನೇರ ಸಂದರ್ಶನದ ಕಾರ್ಯಕ್ರಮ ಏರ್ಪಡಿಸಿತ್ತು. ಬೆನ್ನುಹುರಿ ಅಪಘಾತ, ನಿರ್ವಹಣೆ, ಒತ್ತಡಕಾಯ, ಈಗಿನ ಸೇವಾಕಾರ್ಯಗಳ ಬಗ್ಗೆ ಸವಿಸ್ತಾರವಾಗಿ ಮೂಡಿಬಂದಿತು.

**ತರಿಕೆರೆ :** ಜೂನ್ 2 ರಂದು ತರಿಕೆರೆಯ ರೋಟರಿಕ್ಲಬ್‌ನ ಅಧ್ಯಕ್ಷರಾದ ರೊ. ದಯಾನಂದ ಇವರನ್ನು ಭೇಟಿ ಮಾಡಿ ಸಂಸ್ಥೆಯು ಆಯೋಜಿಸಲಿರುವ ಆರೋಗ್ಯ ತಪಾಸಣಾ ಶಿಬಿರಕ್ಕೆ ಫಲಾನುಭವಿಗಳಿಗಾಗಿ ಗಾಲಿಕುರ್ಚಿಗಳನ್ನು ಒದಗಿಸಲು ಸಹಕಾರ ನೀಡುವಂತೆ ಮತ್ತು ಸಹಾಯ ನೀಡುವಂತೆ ವಿನಂತಿಸಲಾಯಿತು. ನಮ್ಮ ಸಿಬ್ಬಂದಿಗಳಾದ ಆಶ್ರಿತ ಸಿ.ಪಿ. ಮತ್ತು ಮನು ಆರ್. ಭೇಟಿ ನೀಡಿದ ತಂಡದಲ್ಲಿದ್ದರು.

**ಶಿವಮೊಗ್ಗ :** ಜೂನ್ 3 ರಂದು ಶಿವಮೊಗ್ಗ ಜಿಲ್ಲೆಯ ಅಂಗವಿಕಲ ಕಲ್ಯಾಣಾಧಿಕಾರಿ ಶ್ರೀಮತಿ ಶಿಲ್ಪಾ ಎಂ. ದೊಡ್ಡಮನಿಯವರನ್ನು ನಮ್ಮ ತಂಡವು ಭೇಟಿ ಮಾಡಿ ನಮ್ಮ ಸಂಸ್ಥೆಯ ಮಾಹಿತಿ ನೀಡಿ, ಮುಂದಿನ ದಿನಗಳಲ್ಲಿ ಸೇವಾಶಾಮದ ಕಾರ್ಯಚಟುವಟಿಕೆಗಳಿಗೆ ಸಹಕಾರ ನೀಡುವಂತೆ ಮನವಿ ನೀಡಿತು. ಮತ್ತು ಮರುದಿನವೇ ಶಿವಮೊಗ್ಗ ತಾಲೂಕು ಮತ್ತು ಭದ್ರಾವತಿ ತಾಲೂಕಿನ 72 ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು (VRW) ಮತ್ತು 2 ಮಂದಿ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತ (MRW) ಮತ್ತು ಓರ್ವ Co-ordinator ಗಳಿಗೆ ಮಾಹಿತಿ ಶಿಬಿರವನ್ನು ಏರ್ಪಡಿಸಿದರು. ಬಿ.ಎಸ್.ಎನ್.ಎಲ್.ನ ನಿವೃತ್ತ ಏರಿಯಾ ಮ್ಯಾನೇಜರ್ ಶ್ರೀ ಮಂಜುನಾಥರವರು ಕಾರ್ಯಕ್ರಮವನ್ನು ಸಂಯೋಜಿಸಿದ್ದರು.




**ಕದ್ರಿಮಿದ್ರಿ :** ಕದ್ರಿಮಿದ್ರಿಯಲ್ಲಿರುವ ಜೀವನ್ ಸಂಧ್ಯಾ ವೃದ್ಧಾಶ್ರಮದ ಕಾರ್ಯಾಲಯದಲ್ಲಿ ರೋಟರಿ ಅಧ್ಯಕ್ಷರಾದ ಮತ್ತು ವೃದ್ಧಾಶ್ರಮದ ಕಾರ್ಯದರ್ಶಿಯಾದ ರೊ. ನಂಜುಡಪ್ಪ ಹಾಗೂ ರೋಟರಿ ಕ್ಲಬ್‌ನ ಎಂ.ಆರ್. ಕಿರಣ್ ಮತ್ತು ತಂಡದೊಂದಿಗೆ ಜಿಲ್ಲೆಯಲ್ಲಿ ಒಂದು Spinal Injury ಗಾಗಿ ಸೇವಾಕೇಂದ್ರ ತೆರೆಯುವ ಬಗ್ಗೆ ಮಾತುಕತೆ ನಡೆಸಲಾಯಿತು. ಪೂರಕವಾಗಿ ಸ್ಪಂದಿಸಿದ ತಂಡವನ್ನು ನಮ್ಮ ಕೇಂದ್ರದ ವೀಕ್ಷಣೆಗೆ ಬರುವಂತೆ ಆಹ್ವಾನಿಸಲಾಯಿತು.

**ಉಡುಪಿ ಜಿಲ್ಲೆ :** ಜೂನ್ 22 ರಂದು ನಮ್ಮ ಸಂಸ್ಥೆಯ ಸಿಬ್ಬಂದಿಯವರಾದ ಮನುರವರು ಉಡುಪಿ ಜಿಲ್ಲೆಯ 4 ಮಂದಿಯ ತೀವ್ರತರ ಗಾಯಕ್ಕೆ ವೈದ್ಯಕೀಯ ಶುಶ್ರೂಷೆ ನೀಡಿದರು. ಹೊಸದಾಗಿ ಬೆನ್ನುಹುರಿ ಅಪಘಾತಗೊಂಡ ನಾಲ್ವರನ್ನು ಭೇಟಿ ಮಾಡಿ ಸೂಕ್ತ ಸಲಹೆ & ಮಾರ್ಗದರ್ಶನ ನೀಡಿದರು.

**ಬಾಳೆಹೊನ್ನೂರು :** ಜೂನ್ 22 ರಂದು ಬಾಳೆಹೊನ್ನೂರಿನ ರೋಟರಿ ಕ್ಲಬ್‌ನ ಅಧ್ಯಕ್ಷರಾದ ರೊ. ರವಿ ಇವರನ್ನು ಸಿಬ್ಬಂದಿ ಆಶ್ರಿತ್ ಸಿ.ಪಿ.ರವರು ಭೇಟಿ ಮಾಡಿ ಮುಂದಿನ ದಿನಗಳಲ್ಲಿ ಸೇವಾಧಾಮ ಆಯೋಜಿಸಿರುವ ಉಚಿತ ಆರೋಗ್ಯ ತಪಾಸಣೆ ಮತ್ತು ಮಾಹಿತಿ ಕಾರ್ಯಗಾರಕ್ಕಾಗಿ ಧನಸಹಾಯ ನೀಡುವಂತೆ ವಿನಂತಿಸಲಾಯಿತು.

ಶ್ರೀಯುತರು ಮನವಿಗೆ ಸ್ಪಂದಿಸಿರುತ್ತಾರೆ. ಇದೇ ಸಂದರ್ಭದಲ್ಲಿ 2 ಮಂದಿ ಬೆನ್ನುಹುರಿ ಅಪಘಾತ ಗೊಂಡವರನ್ನು ಭೇಟಿ ಮಾಡಿ ಸಲಹೆ, ಮಾರ್ಗದರ್ಶನ ನೀಡಲಾಯಿತು.

**ಕೊಪ್ಪ :** ಜೂನ್ 24 ರಂದು ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲೂಕಿನ ಗಣಪತಿಕಟ್ಟೆಯ ನಿವಾಸಿ ಬೆನ್ನುಹುರಿ ಅಪಘಾತ ಕ್ಕೊಳಗಾದ ದಿವ್ಯಾಂಗರಾದ ರಾಘವೇಂದ್ರರು ತಮ್ಮ ಆರ್ಥಿಕ ಸ್ವಾವಲಂಬಿ ಬದುಕಿಗಾಗಿ ಒಂದು ಗಿರಾಣಿ ಅಂಗಡಿಯನ್ನು ಪ್ರಾರಂಭಿಸಿರುವುದು ದಿವ್ಯಾಂಗರಿಗೆ ಪ್ರೇರಣೆಯಾಗಿದ್ದಾರೆ.

**ಉಡುಪಿ :** ಜೂನ್ 25 ರಂದು ನಮ್ಮ ತಂಡವು ಉಡುಪಿ ಜಿಲ್ಲೆಯ ಪಡುಬಿದ್ರಿಯಲ್ಲಿರುವ ಉಡುಪಿ ಪವರ್ ಕಾರ್ಪೋರೇಶನ್ ಲಿಮಿಟೆಡ್‌ನ ಸಿ.ಎಸ್.ಆರ್. ವಿಭಾಗಕ್ಕೆ ಭೇಟಿಯಿತ್ತು ಸಂಸ್ಥೆಗೆ ಅಗತ್ಯವಿರುವ 2 ಅಂಬುಲೆನ್ಸ್‌ಗಳನ್ನು ಒದಗಿಸಿಕೊಡುವಂತೆ ಮನವಿಯನ್ನು ಸಲ್ಲಿಸಲಾಯಿತು. ವಿನಾಯಕ ರಾವ್, ರೂಪಲಕ್ಷ್ಮಿ, ವಿಷ್ಣುಪ್ರಸಾದ್ ತೆಂಕಿಲ್ಲಾಯ, ಗಿರೀಶ್ ಪರಂಪಳ್ಳಿ, ಚರಣ್ ಕುಮಾರ್‌ರವರು ತಂಡದಲ್ಲಿದ್ದರು.



**ಚಿಕ್ಕಮಗಳೂರು :** ಆಶಾಕಿರಣ ಅಂಧಮಕ್ಕಳ ವಸತಿ ಶಾಲೆಯಲ್ಲಿ ಸೇವಾಭಾರತಿ ಅಧ್ಯಕ್ಷರಾದ ಕೆ.ವಿನಾಯಕ ರಾವ್‌ರವರಿಗೆ ಸನ್ಮಾನ



ಅಥನಿ, ಉಡುಪಿ



**ಉಡುಪಿ :** ಜೂನ್ 23 ರಂದು ಉಡುಪಿಯ ಜಿಲ್ಲಾ ವೈದ್ಯಾಧಿಕಾರಿಗಳಾದ ಡಾ| ನಾಗಭೂಷಣ ಉಡುಪರ ತಂಡವು ಕೊರಂಗ್ರಪ್ಪಾಡಿ ಹಿರಿಯ ಪ್ರಾಥಮಿಕ ಶಾಲೆಯನ್ನು ಭೇಟಿ ಮಾಡಿತು. ಈ ಶಾಲೆಯನ್ನು ಈಗಾಗಲೇ ನಮ್ಮ ಕೇಂದ್ರಕ್ಕಾಗಿ ಬಿಟ್ಟುಕೊಡುವಂತೆ ಜಿಲ್ಲಾ ಪಂಚಾಯತ್‌ನ ಕಾರ್ಯನಿರ್ವಹಣಾಧಿಕಾರಿಯವರನ್ನು ವಿನಂತಿಸಲಾಗಿದ್ದು, ಈ ಭೇಟಿಯ ಅತ್ಯಂತ ಮಹತ್ವದ್ದಾಗಿತ್ತು.

ಪೂರಕವಾಗಿ ಸ್ಪಂದಿಸಿದ್ದು, ಜಿಲ್ಲಾ ವೈದ್ಯಾಧಿಕಾರಿಗಳು ಸೇವಾ ಭಾರತಿಗೆ ಶಾಲೆಯನ್ನು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಕೇಂದ್ರಕ್ಕೆ ವಹಿಸಿಸಲು ಸೂಕ್ತವಾಗಿದೆಯೆಂದೂ PWD ಇಲಾಖೆಯ ಭೇಟಿ ಅಗತ್ಯವಿದೆಯೆಂಬುದಾಗಿ ತಮ್ಮ ವರದಿಯಲ್ಲಿ ಸೂಚಿಸಿರುತ್ತಾರೆ.

ತಂಡದ ಭೇಟಿಯ ಸಂದರ್ಭದಲ್ಲಿ ಸಂಸ್ಥೆಯ ಪ್ರತಿನಿಧಿಗಳಾಗಿ ನಗರಸಭಾ ಸದಸ್ಯರಾದ ವಿಜಯಕೊಡವೂರು, ರೂಪಲಕ್ಷ್ಮಿ, ರಾಯನ್ ಫೆರ್ನಾಂಡಿಸ್, ಸಂಪತ್‌ರಾವ್ ಮತ್ತು ಅಜಿತ್ ಸುವರ್ಣ ಬನ್ನಂಜೆ ಉಪಸ್ಥಿತರಿದ್ದರು.

## ಸಮುದಾಯಾಧಾರಿತ ಆಪ್ತ ಸಮಾಲೋಚನೆ



**ಮೂಡಿಗೆರೆ :** ಬೆನ್ನುಹುರಿ ಅಪಘಾತಕ್ಕೊಳಗಾದ ಬಣಕಲ್ ನಿವಾಸಿಯಾದ ಸೋಮೇಶ್‌ರವರಿಗೆ ನಮ್ಮ ಸಿಬ್ಬಂದಿ ಜೋಸ್ಫಿನರವರು ಅವರ ನಿವಾಸದಲ್ಲಿ ಕೌನ್ಸಿಲಿಂಗ್ ಸೇವೆಯನ್ನು ನೀಡಿರುತ್ತಾರೆ.



**ಸೌತಡ್ಕ :** ಜೂನ್ 7 ರಂದು ಕೊಕ್ಕಡ ಗ್ರಾಮದ ಹೋಳಿಗೆ ಮನೆ ಕ್ಯಾಟರರ್ಸ್‌ನ ಮಾಲಕರಾದ ಶ್ರೀ ಪ್ರಹ್ಲಾದ್‌ರ ಕುಟುಂಬವು ಕೇಂದ್ರಕ್ಕೆ ಆಗಮಿಸಿ ವಿವಾಹ ವಾರ್ಷಿಕೋತ್ಸವದ ಪ್ರಯುಕ್ತ ಕೇಂದ್ರಕ್ಕೆ 5 ಕೆ.ಜಿ. ಸೋನಾಮಸೂರಿ ಹಾಗೂ 25 ಕೆ.ಜಿ. ಕುಚಲಕ್ಕಿಯನ್ನು ನೀಡಿ ಫಲಾನುಭವಿಗಳಿಗೆ ಶುಭ ಹಾರೈಸಿದರು.

## ಕೇಂದ್ರಕ್ಕೆ ಬೇಟಿ

**ಸೌತಡ್ಕ :** ಜೂನ್ 3 ರಂದು ಸೇವಾಧಾಮ ಕೇಂದ್ರಕ್ಕೆ ಹಾಸನ ಜಿಲ್ಲೆಯ ಆಲೂರು ನಿವಾಸಿಯಾದ Ex CRP ಆದ ಶ್ರೀ ರಂಗಸ್ವಾಮಿಯವರು ಭೇಟಿ ನೀಡಿ ಸಂಸ್ಥೆಯ ಕಾರ್ಯ ಚಟುವಟಿಕೆ ಗಳ ಬಗ್ಗೆ ಮಾಹಿತಿ ಪಡಕೊಂಡರು. ಶ್ರೀಯುತರು ಕಾರ್ಗಿಲ್ ಯುದ್ಧದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಮಯದಲ್ಲಿ ಗುಂಡಿನ ದಾಳಿಗೆ ಒಳಗಾಗಿ ಬೆನ್ನು ಮುರಿತಕ್ಕೊಳಗಾಗಿದ್ದರು.

**ಸೌತಡ್ಕ :** ಜೂನ್ 11 ರಂದು ಸೇವಾಧಾಮಕ್ಕೆ ಮಣಿಪಾಲದ ಕೆ.ಎಂ.ಸಿ. ಆಸ್ಪತ್ರೆಯ ಡಿ.ಎಂ.ಆರ್. ವಿಭಾಗದ ವೈದ್ಯಾಧಿಕಾರಿಗಳಾದ ಡಾ| ಮೈತ್ರೇಯಿ ಸಿ. ಪಾಟೀಲ್‌ರವರು ಭೇಟಿಯಿತ್ತು ನಿವಾಸಿಗಳ ಆರೋಗ್ಯ ತಪಾಸಣೆ ನಡೆಸಿ, ವೈದ್ಯಕೀಯ ಸಲಹೆ ನೀಡಿದರು.

**ಸೌತಡ್ಕ :** ಜೂನ್ 26 ರಂದು ವೇಣೂರಿನ ಶ್ರೀ ಮಂಜುನಾಥೇಶ್ವರ ಐಟಿಐನ ಶ್ರೀ ರಜತ್‌ರವರು ತಮ್ಮ ಧರ್ಮಪತ್ನಿಯಾದ ಆಳ್ವಾಸ್ ರವರೊಂದಿಗೆ ಆಗಮಿಸಿ ಸನಿವಾಸಿಗಳೊಂದಿಗೆ ಕುಶಲೋಪರಿ ನಡೆಸಿ ಶುಭ ಹಾರೈಸಿದರು.




**ಸೌತಡ್ಕ :** ಜೂನ್ 18 ರಂದು ಉಜಿರೆಯಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ಬಿ.ಎಡ್. ವಿದ್ಯಾರ್ಥಿಗಳು ವಿಶೇಷ ಅಧ್ಯಯನಕ್ಕಾಗಿ ಸೇವಾಧಾಮ ಕೇಂದ್ರವನ್ನು ಭೇಟಿ ಮಾಡಿ ಮಾಹಿತಿ ಪಡೆದುಕೊಂಡರು ಮತ್ತು ಕೇಂದ್ರ ಕಚೇರಿಯನ್ನು ಬೇಟಿ ಮಾಡಿದರು.

### ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ದಿನದ ಊಟೋಪಚಾರಕ್ಕೆ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು |

### Account Details

| | |
|---|---|
| A/c Holder | - M/s. Sevabharathi(R) |
| A/c No | - 120000400920 |
| IFS Code | - CNRB0010246 |
| Bank | - Canara Bank, Dharmasthala Branch |
| A/c Type | - Current Account |

| | |
|---|---|
| A/c Holder | - M/s. Sevabharathi(R) |
| A/c No | - 01682200072637 |
| IFS Code | - CNRB0010168 |
| Bank | - Canara Bank, Kokkada Branch |

**DONATE & JOIN US IN OUR MISSION**

# ಬಲಹೀನನನಾಗಿಸಿದ ಹೊಟ್ಟೆಪಾಡಿಗಾಗಿ ಅರಸಿದ ಉದ್ಯೋಗ

## ಅಡಿಕೆ ಮರದಿಂದ ಬಿದ್ದು ಬೆನ್ನುಹುರಿ ಆಘಾತಕ್ಕೆ ಒಳಗಾದ ಮೋಹನ್ ಯಶೋಗಾಥೆ



ಬೆನ್ನುಹುರಿ ಅಪಘಾತಕ್ಕೊಳಗಾದ ಇತರರು ತನ್ನಂತೆಯೇ ವಿಶ್ವಾಸದಿಂದ ಸ್ವಾವಲಂಬಿಗಳಾಗಿ ಬದುಕಬೇಕು. ಎಲ್ಲವನ್ನೂ ಕಳೆದುಕೊಂಡ ನನಗೆ ಸೇವಾಧಾಮವು ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ನಡೆಸಿದ ಪುನಃಶ್ಚೇತನ ಕೇಂದ್ರ" ಹಾಗೂ ಸ್ವತಃ ಬೆನ್ನುಹುರಿ ಅಪಘಾತಕ್ಕೊಳಗಾದ ಸೇವಾಧಾಮದ ಸಂಸ್ಥಾಪಕರಾದ ಕನ್ಯಾಡಿ ವಿನಾಯಕ ರಾವ್‌ರವರ ಕಾರ್ಯಚಟುವಟಿಕೆ ನನ್ನ ಜೀವನಕ್ಕೊಂದು ಹೊಸ ದಿಕ್ಕು ನೀಡಿದೆ. ಸೇವಾಧಾಮಕ್ಕೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ ಎನ್ನುತ್ತಾರೆ ಮೋಹನ್.ಕೆ

**ಕೊಕ್ಕಡ:** ಬದುಕೇ ಹಾಗೆ ನಾವು ಅಂದುಕೊಳ್ಳುವುದೊಂದು ವಿಧಿ ಬರಹ ಬಗೆಯುವುದು ಮತ್ತೊಂದು. ನಾವು ಅಂದುಕೊಂಡದ್ದೆಲ್ಲ ನನಸಾಗುವುದಾಗಿದ್ದರೆ ಮನುಷ್ಯ ಸಾವಿರಾರು ವರುಷ ಬದುಕಿ ಬಿಡುತ್ತಿದ್ದನೋ ಏನೊ! ಹೊಟ್ಟೆಪಾಡಿಗಾಗಿ ನಾನಾ ವೃತ್ತಿಯಲ್ಲಿ ಬದುಕು ಕಟ್ಟಿಕೊಳ್ಳುವ ಮಂದಿಗೆ ಅದೇ ವೃತ್ತಿ, ಬದುಕಿಗೆ ಮುಳ್ಳಾಗಬಹುದು ಅಂದುಕೊಂಡಿರುವುದಿಲ್ಲ. ಆದರೆ ಸಾಧಿಸುವ ಛಲವೊಂದಿದ್ದರೆ ಬರಡು ಭೂಮಿಯಲ್ಲೂ ಓಯಸಿಸ್ ಸೃಷ್ಟಿಸಬಲ್ಲದು ಎಂಬುದಕ್ಕೊಂದು ಉದಾಹರಣೆಯೆಂಬಂತೆ ಬದುಕಿ ಮತ್ತೊಬ್ಬರಿಗೆ ಪ್ರೇರಣೆಯಾದ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಅರಿಯಡ್ಕ ಗ್ರಾಮದ ದರ್ಬೆತಡ್ಕ ನಿವಾಸಿ ಮೋಹನ್ ಕೆ. ಅವರ ಯಶೋಗಾಥೆಯನ್ನು ನಾವಿಂದು ಇಲ್ಲಿ ವಿವರಿಸಿದ್ದೇವೆ.

ಮೋಹನ್ ಕೆ. ಅವರು ತಮ್ಮ ಕುಟುಂಬದ ನಾಲ್ವರು ಮಕ್ಕಳಲ್ಲಿ ಹಿರಿಯರು. ಎಲ್ಲಾ ಕುಟುಂಬದಲ್ಲೂ ಇರುವಂತ ಮನೆ ಜವಾಬ್ದಾರಿ ಇವರ ಹೆಗಲ ಮೇಲೆ ಬಿದ್ದಿತ್ತು. ಬಡತನದ ಅನಿವಾರ್ಯತೆಯಿಂದ ತನ್ನ ಪಿ.ಯು.ಸಿ. ವಿದ್ಯಾಭ್ಯಾಸದ ಅವಧಿಯಲ್ಲೆ ಕೂಲಿ ಕೆಲಸದಲ್ಲಿ ತೊಡಗಿಸಿಕೊಳ್ಳುವ ಅನಿವಾರ್ಯತೆ ಎದುರಾಯಿತು. ಒಂದೆಡೆ ಮನೆಯ ಸದಸ್ಯರನ್ನು ಸಲಹುವ ಕರ್ತವ್ಯವಾದರೆ ಇನ್ನೊಂದೆಡೆ ತನ್ನ ಬದುಕನ್ನು ಕಟ್ಟಿಕೊಳ್ಳುವ ಕನಸು ಕಂಡಿದ್ದರು. ಹೀಗೆ ಜೀವನ ಒಂದು ದಡ ಸೇರುವ ಹಂತದಲ್ಲಿದ್ದಾಗ ವಿಧಿಯಾಟ ಬೇರೆಯೇ ನಿರ್ಧರಿಸಿತ್ತು.

2016 ಡಿಸೆಂಬರ್ 25ರಂದು ತನ್ನ ಕಾಯಕದ ನಿಮಿತ್ತ ಅಡಿಕೆ ಮರ ಏರಿದ್ದರು. ಒಂದು ಕ್ಷಣ ಆಯ ತಪ್ಪಿದ ಮೋಹನ್ ಅವರ ಬದುಕು ಮತ್ತು ಕಾಯಕ ಎರಡರಲ್ಲೂ ಮತ್ತೆ ಮೇಲೇಳಲು ಸಾಧ್ಯವೇ ಆಗಿರಲಿಲ್ಲ. ಬಿದ್ದ ರಭಸಕ್ಕೆ ವೈದ್ಯರು ಬೆನ್ನುಹುರಿ ಆಘಾತಕ್ಕೊಳಗಾಗಿರುವುದನ್ನು ಖಚಿತಪಡಿಸಿದ್ದರು. ಸೊಂಟದ ಕೆಳಭಾಗ ಸ್ಪರ್ಶ ಮತ್ತು ನಿಯಂತ್ರಣ ಕಳೆದುಕೊಂಡು ಗಾಲಿಕುರ್ಚಿಯಲ್ಲಿ ಓಡಾಟ ಮಾಡುವಂತಹ ಪರಿಸ್ಥಿತಿ ಎದುರಾಯಿತು.

ಮತ್ತೆ ಹೇಳುವುದುಂಟೆ? ದಿನನಿತ್ಯದ ಸ್ನಾನ–ಶೌಚಕಾರ್ಯಗಳಿಗೆ ಇನ್ನೊಬ್ಬರನ್ನು ಆಶ್ರಯಿಸುವುದು ಅನಿವಾರ್ಯವೇ ಆಗಿತ್ತು. ಈ ಹಾಸಿಗೆ ಹಿಡಿದು ಮತ್ತೊಬ್ಬರ ಅವಲಂಬನೆಯಿದೆಯಲ್ಲ ಇದೊಂದು ತರಹ ನರಕಕ್ಕೆ ಸೇರುವ ಆತ್ಮದಂತೆ ಎಂಬ ಚಿತ್ರಣ ಅವರ ಮನಸ್ಸಿಗೆ ನಾಟಿಯಾಗಿತ್ತು. ಮನೆಯ ಆರ್ಥಿಕ ಸ್ಥಿತಿ ತೀರಾ ಹದಗೆಟ್ಟು ತಾಯಿಯ ಒಡವೆಗಳನ್ನು ಮಾರಿ ಬಂದ ಹಣದಲ್ಲಿ ವೈದ್ಯಕೀಯ ಖರ್ಚನ್ನು ಭರಿಸಬೇಕಾಯಿತು. ಇವೆಲ್ಲ ಜೀವನ ಅಂತ್ಯಕ್ಕೆ ಎಂಬಂತೆ ಅವರ ಮನಸ್ಸು ಗಟ್ಟಿಯಾಗಿತ್ತು.

**ಅದೊಂದು ಅವಕಾಶ :** ಹೀಗೆ ಜೀವನ ಸವೆಸುತ್ತಿದ್ದಾಗ ಮೋಹನ್ ಅವರಿಗೆ ತಿರುವಿನ ಹಾದಿ ಸಿಕ್ಕಿತ್ತು. ಅದು ಅವರು ಯೋಚಿಸದೆ ಬಂದ ಯೋಗವೇನೋ ಸರಿ... ಸುಳ್ಯದಲ್ಲಿ ಒಂದು ಬಾರಿ ಕನ್ಯಾಡಿಯ ಸೇವಾಧಾಮ ನಡೆಸುವ ಸೇವಾಭಾರತಿಯು ಬೆನ್ನು ಹುರಿ ಅಪಘಾತಕ್ಕೊಳಗಾದವರಿಗಾಗಿ ಉಚಿತ ಆರೋಗ್ಯ ತಪಾಸಣಾ ಮತ್ತು ತರಬೇತಿ ಶಿಬಿರ ಆಯೋಜಿಸಿದ್ದರು. ಇದ್ದಕ್ಕಿದ್ದಂತೆ ತಾನು ಯಾಕೆ ಇದರಲ್ಲಿ ಭಾಗವಹಿಸಬಾರದು ಎಂದು ಯೋಚಿಸಿದರು. ತಡಮಾಡದೆ ಶಿಬಿರದಲ್ಲಿ ಭಾಗವಹಿಸಲು ಬೇಕಾದ ಸಿದ್ಧತೆ ಕೈಗೊಂಡರು. ಅವರ ಯೋಗಕ್ಕೆ ಅವಕಾಶವೂ ಒದಗಿಬಂತು.

ಶಿಬಿರದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ನಡೆಸಲ್ಪಡುವ ಪುನಃಶ್ಚೇತನ ಕೇಂದ್ರ "ಸೇವಾಧಾಮ"ದ ಕಾರ್ಯಚಟುವಟಿಕೆಗಳನ್ನು ತಿಳಿದುಕೊಂಡರು. ಸ್ವತಃ ಬೆನ್ನುಹುರಿ ಅಪಘಾತಕ್ಕೊಳಗಾದ ಸೇವಾಧಾಮದ ಸಂಸ್ಥಾಪಕರಾದ ಕನ್ಯಾಡಿ ವಿನಾಯಕ ರಾವ್‌ರವರ ಕಾರ್ಯಚಟುವಟಿಕೆ ತಮ್ಮ ಜೀವನಕ್ಕೊಂದು ಹೊಸ ದಿಕ್ಕು ಬರೆದಿತ್ತು. ತಾನು ಇವರಿಂದ ಪ್ರೇರೇಪಣೆಗೊಂಡು ಅವರ ಸೂಚನೆಯಂತೆ ಸೌತಡ್ಕದಲ್ಲಿರುವ ಸೇವಧಾಮ ಪುನಶ್ಚೇತನ ಕೇಂದ್ರಕ್ಕೆ ದಾಖಲಾಗುತ್ತಾರೆ.

ತಾಯಿಯೊಂದಿಗೆ ಪುನಶ್ಚೇತನ ಕೇಂದ್ರಕ್ಕೆ ಬಂದ ಮೋಹನ್ ಅವರು ಆಗಲೇ ಮನಸ್ಸಿನಲ್ಲಿ ನಿರ್ಧರಿಸಿಯಾಗಿತ್ತು, ತಾನು ಸ್ವಾವಲಂಬಿಯಾಗಿ ಏನನ್ನಾದರೂ ಸಾಧಿಸಬೇಕೆಂದು. ಅದರಂತೆ ನಿರಂತರ ತರಬೇತಿಯಲ್ಲಿ ತೊಡಗಿಕೊಂಡರು. ಅದರ ಪರಿಣಾಮ ಎಷ್ಟರ ಮಟ್ಟಿಗಾಯಿತು ಎಂಬುದಕ್ಕೆ ಮಾದರಿ ಎಂಬಂತೆ ಪುನಶ್ಚೇತನದಲ್ಲಿದ್ದು ಒಂದು ತಿಂಗಳಾಗುವಷ್ಟರಲ್ಲಿ ತಮಗೆ ಬೆನ್ನೆಲುಬಾಗಿದ್ದ ತಾಯಿಯನ್ನು ಮನೆಗೆ ಕಳುಹಿಸಿ ತಾನು ಸ್ವಯಂ ಸಹಾಯದಿಂದ ಕೇಂದ್ರದಲ್ಲಿ ತರಬೇತಿಯಲ್ಲಿ ತೊಡಗಿದರು. ಮಗದೊಂದು ತಿಂಗಳಾಗುವಷ್ಟರಲ್ಲಿ ಪೂರ್ಣವಾಗಿ ತಾನು ಸ್ವಾವಲಂಬಿಯಾಗಿ ಬದುಕಬಲ್ಲೆ ಎಂಬ ವಿಶ್ವಾಸ ತುಂಬಿ ಕೇಂದ್ರದಿಂದ ಹೊರಟರು.

ಮನೆಯಲ್ಲಿ ಸಾಧ್ಯವಾದಷ್ಟು ವ್ಯಾಯಾಮ ಮಾಡ ತೊಡಗಿದರು. ಆದರೂ ಮನಸ್ಸು ಸಾಧಿಸಬೇಕೆಂದು ಹಾತೊರೆಯುತ್ತಿತ್ತು. ಸೇವಧಾಮದಿಂದ ಬಂದ ಸೂಚನೆಯಂತೆ ಬೆಂಗಳೂರಿನ ದಿ ಅಸೋಸಿಯೇಷನ್ ಆಫ್ ಪೀಪಲ್ ವಿಥ್ ಡಿಸೇಬಿಲಿಟಿ (APD) ಸಂಸ್ಥೆಯಲ್ಲಿ 15 ದಿನಗಳ ಕಾಲ ನಡೆದ ಪಿಯರ್ ಟ್ರೈನಿಂಗ್‌ನಲ್ಲಿ ಭಾಗವಹಿಸಿ ಪಿಯರ್ ಟ್ರೈನರ್ ಆದರು. ತಾನು ತರಬೇತಿ ಪಡೆಯುವುದಲ್ಲದೆ ಬೇರೊಬ್ಬರ ನೋವಿಗೆ ತರಬೇತಿ ನೀಡುವ ಬಲಭೀಮರಾದರು.

**ಎರಡನೇ ಜೀವನ :** ಕೇವಲ ಪಿಯರ್ ಟ್ರೇನರ್ ಆಗುವುದಲ್ಲದೆ ತನ್ನ ಬದುಕಿನ ಎರಡನೇ ಕಾಲಘಟ್ಟವನ್ನು ಅನುಭವಿಸುವ ಮಟ್ಟಿಗೆ ತನ್ನ ಸಾಧನೆಯನ್ನು ಹಿಗ್ಗಿಸಿದರು. ಕ್ರೀಡಾ ಕ್ಷೇತ್ರದಲ್ಲಿ ಹೊರಟ ಅವರಿಗೆ ಸಿಕ್ಕಿರುವುದು ವಿಶೇಷ ಮನ್ನಣೆ ಎಂದರೆ ತಪ್ಪಾಗಲಾರದು. ಬೆಂಗಳೂರಿನಲ್ಲಿ ನಡೆದ ಬಾಸ್ಕೆಟ್‌ಬಾಲ್ ಸ್ಪರ್ಧೆಯಲ್ಲಿ ಭಾಗವಹಿಸಿ ದ್ವಿತೀಯ ಸ್ಥಾನ ಪಡೆದರು. ಬೆಳಗಾವಿಯಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಬಾಸ್ಕೆಟ್ ಬಾಲ್ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿದರು. ಮನೆಯಲ್ಲೇ ಇದ್ದ ಇವರ ಮನಸ್ಸು ಸಾಧನೆಯ ಕಡೆಯೇ ಇತ್ತು. ಸೇವಾಧಾಮದ ಪ್ರಮುಖರನ್ನು ಸಂಪರ್ಕಿಸಿ ಕೇಂದ್ರದಲ್ಲಿ ತನ್ನನ್ನು ಟ್ರೈನರ್ ಆಗಿ ಕೆಲಸ ಕೊಡುವಂತೆ ವಿನಂತಿಸಿದರು. ಅವರಿಗೆ ಸ್ಪಂದಿಸಿದ ಸೇವಾಧಾಮ ಕೆಲಸ ನೀಡಿ ಬೆನ್ನುತಟ್ಟಿ ಪ್ರೋತ್ಸಾಹಿಸಿತು. ಸೇವಾಧಾಮದಲ್ಲಿ ದಾಖಲಾಗುವ ಬೆನ್ನುಹುರಿ ಅಪಘಾತಕ್ಕೊಳಗಾದವರಿಗೆ ದೈಹಿಕ ತರಬೇತಿ ನೀಡುತ್ತ ತಾನೂ ಪ್ರೇರಣೆಯಾದರು.

ಕಳೆದ ಬಾರಿ ಜೂನ್ ತಿಂಗಳಿನಲ್ಲಿ ಹಾಸನದಲ್ಲಿ ನಡೆದ ಪಾರ ಬ್ಯಾಟ್‌ಮಿಂಟನ್ ಸ್ಪರ್ಧೆಯಲ್ಲಿ ಭಾಗವಹಿಸುವ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಮುಂದಿನ ದಿನಗಳಲ್ಲಿ ಕ್ರೀಡಾ ವಿಭಾಗದಲ್ಲಿ ಇನ್ನೂ ಹೆಚ್ಚು ಸಾಧಿಸಬೇಕೆಂಬ ಛಲ ಮೋಹನರದ್ದು. ತನ್ನ ಚಿಕಿತ್ಸೆಗೆ ತಾಯಿಯು ಮಾರಿದ ಒಡವೆಗಳನ್ನು ಮಾಡಿಸಿಕೊಡಬೇಕೆಂಬ ಆಸೆ ಹೊತ್ತ ಅವರಿಗೆ ಸೇವಾಧಾಮವು ಆಸರೆಯಾಗಿ ನಿಂತಿದೆ. ಸೇವಾಧಾಮ ನೀಡುತ್ತಿರುವ ಸಂಭಾವನೆಯೇ ಈಗಿನ ಆದಾಯ ಮೂಲ. ಪರಿಸ್ಥಿತಿ ಶಾಂತವಾಗಿದ್ದ ಬದುಕಿನ ಅಲೆ ವಿರುದ್ಧ ದಿಕ್ಕಿಗೆ ಕೊಂಡೊಯ್ದರೂ ಹುಟ್ಟು ಬಿಡದೆ ಹಾಯಿ ದೋಣಿಯ ನೌಕೆಯನ್ನು ದಡ ಸೇರಿಸುವ ಸಾಹಸಗಾಥೆ ಅವರದ್ದು. ಬದುಕಿನಲ್ಲಿ ಏನು ಇಲ್ಲ, ಎಲ್ಲಾ ಕಳೆದುಕೊಂಡೆ ಎಂಬವವರಿಗೆ ಯಶೋಗಾಥೆಯ ಮೋಹನ್ ಪ್ರೇರಣೆಯಾಗಿದ್ದಾರೆ. ಅವರ ಆಸೆ–ಆಕಾಂಕ್ಷೆಗಳು ಈಡೇರಲಿ ಎಂಬುದು ಸೇವಾಧಾಮದ ಹಾರೈಕೆ.

*The only disability in life is bad attitude*